

# ಉನ್ನತ ದರ್ಜೆವೈರಾಣು ಸಂಶೋಧನಾಲಯಗಳು ಮನುಕುಲದ ಸೌಹಾರ್ದ-ನೆಮ್ಮದಿಗೆ ಸಂಚಕಾರ?

ಚೀನಾದ ವುಹಾನ್‌ನ ಪ್ರಯೋಗಾಲಯದಿಂದ ಕೊರೊನಾ ವೈರಾಣು ಸೋರಿಕೆ ಆಗಿರಬಹುದೇ ಎನ್ನುವ ಪ್ರಶ್ನೆಗೆ ಸ್ಪಷ್ಟ ಉತ್ತರ ಇನ್ನೂ ಸಿಕ್ಕಿಲ್ಲ. ವುಹಾನ್ ಲ್ಯಾಬ್‌ನಿಂದ ವೈರಾಣು ಸೋರಿಕೆ ಆಗಿದೆ ಎಂದು ಭಾವಿಸುವುದಾದರೆ, ಜಗತ್ತಿನ ಉಳಿದ ಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇಂಥ ಲ್ಯಾಬ್‌ಗಳಿಂದಲೂ ಉದ್ದೇಶಪೂರ್ವಕವಾಗಿಯೋ ಆಕಸ್ಮಿಕವಾಗಿಯೋ ಸೋರಿಕೆ ಉಂಟಾದರೆ ಮನುಕುಲದ ಗತಿ ಏನಾಗಬಹುದು ಎನ್ನುವುದು, ವಿಶ್ವಶಾಂತಿಯ ಬಗ್ಗೆ ಕಾಳಜಿ ಉಳ್ಳವರೆಲ್ಲರೂ ಗಂಭೀರವಾಗಿ ಯೋಚಿಸಬೇಕಾದ ಸಂಗತಿ. ಇಪ್ಪತ್ತಮೂರು ದೇಶಗಳಲ್ಲಿ 59 ಉನ್ನತ ದರ್ಜೆಯ ವೈರಾಣು ಸಂಶೋಧನಾಲಯಗಳು ಕಳೆದೊಂದು ದಶಕದಲ್ಲಿ ಆರಂಭಗೊಂಡಿವೆ ಎನ್ನುವ ಸುದ್ದಿಯೇ ನಿದ್ದೆಗೆಡಿಸುವಂತಹದ್ದು. ಸುರಕ್ಷತೆಯ ಹೆಸರಿನಲ್ಲಿ ಒಂದೊಂದೇ ದೇಶ ಅಣುಬಾಂಬ್‌ಗಳನ್ನು ಗುಟ್ಟಾಗಿಯೋ ಬಹಿರಂಗವಾಗಿಯೋ ರೂಪಿಸಿ ಇಟ್ಟುಕೊಂಡಿರುವಂತೆ, ಈಗ ವೈರಾಣು ಕೇಂದ್ರಗಳನ್ನೂ ಪೋಷಿಸತೊಡಗಿವೆ. ಕೊರೊನಾ ಸ್ಫೋಟದ ಹಿನ್ನೆಲೆಯಲ್ಲಿ ಮಡಿಲಿನಲ್ಲಿ ಕಟ್ಟಿಕೊಂಡಿರುವ ಮೃತ್ಯುವಿನಂತೆ ಈ ಪ್ರಯೋಗಾಲಯಗಳು ಗೋಚರಿಸುತ್ತಿವೆ. ಈ ಕೇಂದ್ರಗಳ ಧ್ಯೇಯೋದ್ದೇಶ ಮಾನವ ಕಲ್ಯಾಣ ಎಂದು ಮೇಲ್ನೋಟಕ್ಕೆ ಕಾಣಿಸುತ್ತದಾದರೂ, ಜೈವಿಕ ಅಸ್ತ್ರಗಳು ಹಾಗೂ ಜೈವಿಕ ಭಯೋತ್ಪಾದನೆಯ ಸಾಧ್ಯತೆಗಳು ವೈರಾಣು ಸಂಶೋಧನಾಲಯಗಳ ಹೆಚ್ಚಳದಿಂದ ಹೆಚ್ಚಾಗಿವೆ ಎನ್ನುವುದನ್ನು ನಾವು ಮರೆಯಬಾರದು.

■ ಉಮರ ಫಾರೂಕ್ ಜೆ. ಮೀರಾನಾಯಕ
ಸಂಶೋಧನಾ ವಿಜ್ಞಾನಿ,
ವೈರಾಣು ಸಂಶೋಧನೆ ಹಾಗೂ ರೋಗ ನಿರ್ಣಯ ಪ್ರಯೋಗಾಲಯ; ಹಾವೇರಿ